doc-188
T-P-36

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿನಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 146] ಸೋಮವಾರ 11—2—46 [ಬಿಡಿ ಪ್ರತಿ 6 ಪೈ

ಪಡಿಭತ್ತ ಇಳಿಯುವುದೇ ?

ಕಾಂಗ್ರೆಸ್ಸಿಗೆ ಸೇರಿದರು

ಓಲನ್ಡಷರ್ ಫೆ. 7—ಚತ್ಕಾರಿಯು ಮುಸ್ಲಿಂಲೀಗಿನ ಅಧ್ಯಕ್ಷರಾದ ಹಫಿಜ್ ಮಹಮದ್ ಸೆಡ್ಡಿಕರು ಮುಸಲಿಂಲೀಗನ್ನು ತ್ಯಜಿಸಿ ಕಾಂಗ್ರೆಸ್ಸಿಗೆ ಸೇರಿದಂತೆ ವರ್ತಮಾನ ಒಂದಿದೆ.

ಭಾರತದ ಸ್ವಾತಂತ್ರ್ಯ

ನವ ದೆಹಲಿ ಫೆ. 7—ಯು. ಪಿ. ವೃತ್ತಗಾರರಿಗೆ ಕೊಟ್ಟ ಹೇಳಿಕೆಯಲ್ಲಿ ವಾರ್ ಕೆಮೆಂಟರಿ ನಿಯೋಗದ ಸದಸ್ಯರಾದ ವಿ|| ಸೋರೆನ್ಸನ್ನರು ' ಭಾರತದ ಸ್ವಾತಂತ್ರ್ಯವನ್ನು ಬ್ರಿಟಿಷರು ಶ್ರುತವಾಗಿ ದೊರಕಿಸಬೇಕೆಂಬ ಎಷ್ಟು ಒತ್ತಿ ಹೇಳಿದರೂ ಅವು ಕಡಿಮೆ ಬಂದರು.

ಅಂಬೇಡ್ಕರರ ಹೇಳಿಕೆ

ಹೊಸದಿಲ್ಲಿಯಲ್ಲಿ ಗಾಂಧೀ ವೈದ್ಯಾಸದಲ್ಲಿ ಕಟ್ಟಿದ ಭವ್ಯ ಪೆಂಡಾಲದಲ್ಲಿ ವಿ ಎಸ್. ಎ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಹಿಂದುಳಿದ ಜಾತಿಯವರ ಪತಿನಿಧಿಸಭೆ ಕೂಡಿದಾಗ ಸುಮಾರು 30 ಸಾವಿರ ಜನರು ಸೇರಿದ್ದರು. ಭಾಷಣ ಮಾಡುತ್ತಾ ಡಾ|| ಅಂಬೇಡ್ಕರವರು ಹಿಂದುಳಿದ ಜಾತಿಯವರು ಹಿಂದುಗಳಲ್ಲ ಅವರು ಹಿಂದುಗಳಿಗಿಂತ ಬೇರೆ ಇರುವುದರಿಂದ ತಮ್ಮದೊಂದು ಬೇರೆ ಜಾತಿಯನ್ನೇ ನಿರ್ಮಾಣ ಮಾಡಬೇಕು ' ಎಂದು ಮೊದಲಾಗಿ ಹೇಳಿದರಂತೆ.

ಮದರಾಸು ಫೆ 9— ಭಾರತದಲ್ಲಿ ಪ್ರತಿಯೊಬ್ಬ ದೊಡ್ಡವರಿಗೂ ಅಕ್ಕೀ ಗೋಧಿ ಪಡಿಭತ್ಯವನ್ನು 1 ಪೌಂಡಿನಿಂದ 12 ಔನ್ಸಿಗೆ ಇಳಿಸುವುದು ಅವಶ್ಯಕವೆಂದು ಬೆಂಗಳೂರಿನಲ್ಲಿ ವೈಸರಾಯರ ಅಧ್ಯಕ್ಷತೆಯಲ್ಲಿ ನಡೆದ ಆಹಾರ ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು.

ವಾಷಿಂಗ್ಟ್ ಫೆ 8— ಮರಣದಂಡನೆಗೆ ಗುರಿಯಾಗಿರುವ ಜ || ಯಮಿಷಿಟಾರವರ ಪ್ರಾಣಭಿಕ್ಷೆಯನ್ನು ಪೆ. ! ಟ್ರೂಮನ್ನರು ತಿರಸ್ಕರಿಸಿರುವರು.

ಜಿನೀವಾ ಫೆ. 8—ಹಳೇಲೀಗ್ ಆಫ್ ನೇಶನ್ಸಿನಕಡೆ ವಿಾಟಿಂಗು ಏಪ್ರಿಲ್ ತಾ|| ೧೫ರಲ್ಲಿ ನಡೆಯುವುದೆಂದು ಪ್ರಕಟವಾಗಿದೆ

ನವ ದೆಹಲಿ ಫೆ 8— ಭಾರತದ ಸ್ವಾತಂತ್ರ್ಯ ವಿಷಯದಲ್ಲಿ ಭಾರತದ ಎಲ್ಲಾ ಪಾರ್ಟಿಗಳೂ ಒಂದಾಗಿವೆ ಎಂದು ವಾ|| ನಿ || ಮಂಡಲಿ ಸದಸ್ಯರು ಪತ್ರಿಕಾ ಪ್ರತಿನಿಧಿಗೆ ತಿಳಿಸಿದರು

ಬಮ್ಮ, ಫೆ 7— ಕ್ಷಿಮ ಅಂಕುರಿಸದಂತೆ ಮುಳಿಯಾಗಲು ಒಬ್ಬ ಸಾಧು ವು ಪೂರ್ಸಮಂಡಿ ಚೌಕದಲ್ಲಿ ನುಳಿಬೀಳುವವರೆಗೂ ಅಮರಣಾಂತ ಉಪವಾಸ ಪ್ರಾರಂಭಿಸಿರುವನು ಹತ್ತು ದಿನಗಳಾಗಿವೆ. ಸಾಧುವನ್ನು ಜನರು ಗುಂಪುಗುಂಪಾಗಿ ಬಂದು ನೋಡುತ್ತಿರುವರು ಹಿಂದೂಗಳು ಇಂದ್ರ ದೇವನ ತೃಪ್ತಿಗಾಗಿ ಹವನ ಹೋಮಗಳನ್ನು ನಡೆಸುತ್ತಿರುವರು. ಮುಸ್ಲಿಮರು ವೆಂಬಣಿಗೆ ನಡೆಸಿ ವಿಶೇಷ ಪ್ರಾರ್ಥನೆ ಸಲ್ಲಿಸಿರುವರು.

ಬಾರಿಷ್, ಫೆ 8— ದೇಶದಲ್ಲಿನ ಆಹಾರ ಪರಿಸ್ಥಿತಿ ಕೆಟ್ಟು ಕ್ಷಾಮ ತಲೆದೋರಿದರೆ ದಂಗೆ ಉಂಟಾಗುವುದೆಂದು ಪಂ || ಜವಾಹರಲಾಲರು ತಾವು ನಾಡಿದ ಭಾಷಣದಲ್ಲಿ ಸರ್ಕಾರವನ್ನು ಎಚ್ಚರಿಸಿರುವರು.

ಮಹಾರುದ್ರ ಹೋಮ

(ನಮ್ಮ ವಿಶೇಷ ಸುದ್ದಿಗಾರರಿಂದ)

ನಂಜನಗೂಡು ಫೆ 10

ಭೂ ಕೈಲಾಸವೆಂದು ಪ್ರಸಿದ್ಧವಾಗಿರುವ ನಂಜನಗೂಡಿನಲ್ಲಿ ಶ್ರೀ ನಂಜುಂಡೇಶ್ವರಸ್ವಾಮಿ ದೇವಭ್ಥಾನದ ಮುಂಭಾಗದಲ್ಲಿ ನಿರ್ಮಿಸಲಾಗಿರುವ ಭಾರೀ ಚಪ್ಪರದಲ್ಲಿ ಶ್ರೀ ಬಿ. ಏ ಪಂಡಿತರು, ಶ್ರೀ ಬಿ. ಕೃಷ್ಣಸ್ವಾಮಿ ಮುಂತಾದವರು ಏರ್ಪಡಿಸಿರುವ ಮಹಾರುದ್ರಹೋಮ ಈ ದಿವಸ ಬೆಳಿಗ್ಗೆ ಪ್ರಾರಂಭವಾಯಿತು. ಹೋಮ ಮಂಟಪವು ತಳಿರು ತೋರಣಗಳಿಂದ ಅಲಂಕೃತವಾಗಿದೆ. ಚಪ್ಪರವು ಸ್ತ್ರೀಯರು ಪುರುಷರು ನುತ್ತು ಕುಡುಗರಿಂದ ಕಿಕ್ಕಿರಿದ್ದಿತ್ತು. ಈ ದಿವಸ ಇತರ ಪ್ರದೇಶಗಳಿಂದ ಸುಮಾರು ಐನೂರು ಮಂದಿ ಹೋಮದರ್ಶನಾರ್ಥವಾಗಿ ಆಗಮಿಸಿರುವರು. ಹೋಮ ದರ್ಶನಕ್ಕಾಗಿ ಸ್ತ್ರೀ ಪುರುಷರಿಗೆ ಪ್ರತ್ಯೇಕ ಸ್ಥಳವನ್ನೇರ್ಪಡಿಸಲಾಗಿದೆ ಮಹಾಹೋಮ ದರ್ಶನಕ್ಕಾಗಿ ಆಗಮಿಸುವವರೆಲ್ಲರಿಗೂ ಹೋಮ ಸಮಿತಿಯವರು ಏರ್ಪಡಿಸಿರುವ ದಿವ್ಯ ಭೋಜನವು ಸಮರ್ಪಕವಾಗಿದೆ. ಹೋಮ ಸಮಿತಿಯವರು ಕೈಗೊಂಡಿರುವ ಅನ್ನದಾನದ ಏರ್ಪಾಡು ಸ್ವವಸ್ತುತವೂ ಪ್ರಶಂಶನೀಯವೂ ಆಗಿದೆ. ಹೋಮ ಕಾಲದಲ್ಲಿ ಸರ್ವರೂ ಭಗವದ್ಭಜನೆಯಲ್ಲಿ ಅಚಲ ಭಕ್ತಿಯನ್ನಿಟ್ಟುಕೊಂಡು ಕಾರ್ಯಕಲಾಪಗಳನ್ನು ಸಭ್ಯ ರೀತಿಯಲ್ಲಿ ಪ್ರೇಕ್ಷಿಸುತ್ತಿದ್ದರು.

ಕಾರ್ಯಕ್ರಮ

ಈ ಮಾಘ ಶುದ್ಧ 9 ಭಾನುವಾರ 10—2—1946 ಪ್ರಾತಃಕಾಲ 9 ಘಂಟೆಗೆ ಈ ಸ್ಥಳವತ್ತು ಪರಸ್ಥಳಗಳ ಭಕ್ತಾದಿಗಳು ತೀರ್ಥಘಟ್ಟಕ್ಕೆ ಪಯಣ ಅಲ್ಲಿಂದವಂಗಳಾದ್ಯದೊಡನೆ ಹುಲ್ಲಿಜರ ಸಮೇತ ಪೂರ್ಣ ಕುಂಭದೊಡನೆ ಹೊರಟು ದೇವಸ್ಥಾನ ಪ್ರದಕ್ಷಿಣೆಮಾಡಿಕೊಂಡು ಮಹಾರುದ್ರಹೋಮ ಮಂಟಪಕ್ಕೆ ಪ್ರವೇಶಮಾಡಿ, ದೇಶ ಕಲ್ಯಾಣಕ್ಕಾಗಿ ಮತ್ತು ಶ್ರೀಮನ್ಮಹಾರಾಜರವರು ಮತ್ತು ಅವರ ಕುಟುಂಬ ಕ್ಷೇಮಕ್ಕಾಗಿ ಈ ಕಾರ್ಯವು ನೆರವೇರಿಸಕ್ಕಿದ್ದೆಂದು ದೇವರ ಪ್ರಾರ್ಥನೆಯಾದ ನಂತರ ಋತ್ವಿಗ್ವರ್ಣ, ಪುಣ್ಯಾಹ, ನಾಂದಿ, ಕಲಶಸ್ಥಾಪನೆಗಳ ಅನಂತರ ಮಹಾನ್ಯಾಸ ಪೂರ್ವಕ ಏಕಾದಶವಾರರುದ್ರ ಪಾರಾಯಣ, ಅರ್ಚನೆ, ಮತ್ತು ರುದ್ರಹೋಮ ನಡೆಯಿತು. ಪ್ರತ್ಯೇಕ ಸವಗ್ರಹಜಪ, ಪೂಜೆ, ಹೋಮಗಳು, ಋಗ್ಯಜುಃ ಸಾಮವೇದ ಪಾರಾಯಣಗಳೂ ನಡೆಯಿತು .11—2— 1946 ರಲಾಗಾಯ್ತು ಪ್ರತಿದಿನವೂ 8ಘಂಟೆಯ ಮೇಲೆ ಅರ್ಚನ ಪಾರಾಯಣ, ಹೋಮ ಕರ್ಮಗಳು ನಡೆಯುವುವು. 20—2—1946ರ ದಿನದ ಪೂರ್ಣಾಹುತಿಯೊಂದಿಗೆ ಕರ್ಮವು ಮುಕ್ತಾಯವಾಗುವುದು ಭಕ್ತಾದಿಗಳು ದಯಮಾಡಿ ದರ್ಶನಲಾಭಗಳಾಗಬೇಕೆಂದು ಸಮಿತಿಅಧ್ಯಕ್ಷರಾದ ಬಿ. ಏ ಪಂಡಿತರು ಕೋರುತ್ತಿರುವರು.

ಪ್ರಭು ಭೇಟಿ

ವಿಶೇಷ ಸುದ್ದಿ] ನಂಜನಗೂಡು ಫೆ 10

ಮಹಾ ರುದ್ರಹೋಮ ಪರ್ಯವಸಾಯವಾಗುವುದರೊಳಗಾಗಿ ನಮ್ಮ ಪ್ರಭುಗಳು ಹೋಮ ಸಂದರ್ಶನ ಮಾಡುವುದಾಗಿ ತಿಳಿಯುಂದಿದೆ.

ಉಪನ್ಯಾಸ

ಸ್ವಂ ಸು] ನಂಜನಗೂಡು ಫೆ 10

ಮಹಾ ಹೋಮ ಸಂದರ್ಭದಲ್ಲಿ ಹೋಮ ಸಮಿತಿಯವರು ಪ್ರತಿದಿನವೂ ಉಪನ್ಯಾಸವನ್ನು ಏರ್ಪಡಿಸಿರುವರು ತಾ 12ರಲ್ಲಿ ವೇ || ಬ್ರ || ಶ್ರೀ || ಕವೀಶಂ ಪಂಡಿತರತ್ನಂ ವೆಂಕಟೇಶ ಶಾಸ್ತ್ರಿಗಳವರು ಮಹಾರುದ್ರದ ವಿಷಯ ಉಪನ್ಯಾಸ ಮಾಡುವರು

ತಿರಸ್ಕರಿಸಿದ

ಸ್ವೀಡಿಸಿಂಹಾಸನಕ್ಕೆ ಅಕ್ಕ ಹಕ್ಕುದಾರನಾದ ಡಾಕ್ ಜಾನನು ಅಶನಿಗೆ ಜ|| ಫ್ರಾಂಕೋ ಬಹುಮಾನವಾಗಿ ಕಳುಹಿಸಿದ ಒಂದು ಕೆಡಿಲಾಕ್ ಮೋಟಾರುಕಾರ ತೆಗೆದುಕೊಳ್ಳದೆ ತಿರಸ್ಕರಿಸಿದನು.

ಕೃಷ್ಣರಾಜನಗರದ ತಾಲ್ಲೂಕು ಸಮ್ಮೇಳನ

ತಾ|| 9—2—46 ರಲ್ಲೂ, ಕೃಷ್ಣರಾಜನಗರದ ತಾಲ್ಲೂಕು ಸಮ್ಮೇಳನವು ಶ್ರೀಮೂ ಎಫ್ ಸಿ. ದೇವರಾಜೇಅರಸು ನವರಧಿಕ್ಯ ಅಧ್ಯಕ್ಷತೆಯಲ್ಲಿ ಒಹಳ ವೈಭವದಿಂದಲೂ ಏಜ್ಯಂತಿಯಿಂದಲೂ ಯಶಸ್ವಿಯಾಗಿ ನೆರವೇರಿತು. ಜಿಲ್ಲಾ ಬೋರ್ಡ ಅಧ್ಯಕ್ಷರು ಸಬ್ ಡಿವಿಜ್ ಅಫೀಸರು ಮುಂತಾದ ಇತರ ಅಧಿಕಾರಿಗಳೂ ಅನೇಕ ಖಾಸಗೀ ದೊಡ್ಡ ಮನುಷ್ಯರುಗಳೂ ಸಭೆಯಲ್ಲಿದ್ದರು. 5ನೆ ವಿನ್ಯಾಸಗಳು ಚರ್ಚೆಯಾಯಿತು. ಶ್ರೀಮನ್ಮಹಾರಾಜರಿಗೆ ಸಂತಾಪಸೂಚಕ ಪ್ರಸ್ತಾವನೆಯೂ ಒಂದಿದ್ದಕ್ಕೆ ಗೌರವಯುತವಾದ ಅಭಿನಂದನೆಗಳನ್ನು ಅರ್ಪಿಸಲಾಯಿತು. ದಿವಾನ್ ಸಾಹೇಬರಿಗೆ ಸುಖ ಪ್ರಯಾಣವನ್ನು ಜಯಪ್ರದವನ್ನೂ ಕೋರಲಾಯಿತು ಎಫ್ ಸಿ. ದೇವರಾಜೇ ಅರಸಿನವರು, ಸಭೆಯನ್ನು ವಂದಿಸಿ, ಆಹಾರ, ಕಪ್ಪಾಸು ನಿವಾರಣೆಗೆ ಕೋಆಪರೇಟಿವ್ ವ್ಯವಸಾಯ ಕೃಗಾರಿಕೆ. ವಿದ್ಯಾಭ್ಯಾಸ, ಪ್ರಜೆಗಳ ಕರ್ತವ್ಯ, ಹೊಸಯೋಜನೆಗಳು, ಪ್ರಾಯದ ಕರ್ತವ್ಯ, ಸ್ವೈಮಲ್ಯ, ಆರೋಗ್ಯ. ಪಿ. ಡಬ್ಲು ಡಿ ಮುಂತಾದವುಗಳ ಮೇಲೆ ಒಹಳ ಸ್ವಾರಸ್ಯವಾಗಿ ಭಾಷಣ ಮಾಡಿದರು. ಮಹಾರಾಜರ ಶ್ರೇಯಸ್ಸಿ ಪ್ರಾರ್ಥನೆಯಾಗಿ ಮಂಗಳಾಚರಣೆಯಾಗಿ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಮೈಸೂರು ಸಂಸ್ಥಾನದ
ಪತ್ರಿಕೋದ್ಯೋಗಿಗಳ

4-ನೇ ಸಮ್ಮೇಳನದ ಅಧ್ಯಕ್ಷರಾದ 'ಕಲೀವ್-ಉಲ್-ಮುಲ್ಕ್' ಸಯ್ಯದ್ ಗೌಸ್ ಮೋಹಿಯುದ್ದೀನರು ಮಾಡಿದ ಅಧ್ಯಕ್ಷ ಭಾಷಣವು ವಿಮೋಚನವಾಗಿಯೂ ಅನೇಕ ಉಪಯುಕ್ತ ವಿಷಯಗಳನ್ನೊಳಗೊಂಡದ್ದಾಗಿಯೂ ಇರುವುದು ಭಾಷಣವನ್ನು ಪೂರ್ತಿ ಪಠಿಸಲು ಸಮಯಸಂಕೋಚವಾಗಿರುವುದರಿಂದ ಅದರಲ್ಲಿನ ಕೆಲವು ಮುಖ್ಯ ವಿಷಯಗಳನ್ನು ಇಲ್ಲಿ ಪ್ರಕಟಿಸಲಾಗಿದೆ.—

ಮೈಸೂರು ಸಂಸ್ಥಾನದ ಪತ್ರಿಕಕರ್ತರ ನಾಲ್ಕನೆಯ ಮಹಾ ಸಮ್ಮೇಳನದ ಈ ಅಧ್ಯಕ್ಷ ಸ್ಥಾನವು ಮಹತ್ವಪೂರ್ಣವಾದುದೂ ಅತ್ಯಂತ ಗೌರವಾನ್ವಿತವಾದುದು ಆಗಿದೆ ಇಂಥ ಸ್ಥಾನ, ಗೌರವಗಳನ್ನು ನನಗೆ ದೊರಕಿಸಿಕೊಟ್ಟಿದ್ದಕ್ಕಾಗಿ ಸಹೋದ್ಯೋಗಿಗಳಾದ ಅನೇಕ ಮಿತ್ರರು ಸಸ್ನೇಹಪೂರ್ವಕವಾಗಿ ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾಗಿದೆ.

ಂ ಂ

ಯುದ್ಧವೇನೋ ಮುಗಿದು ಹೋಯಿತು. ಆದರೆ ಇನ್ನೂ ನಿಜವಾದ ಶಾಂತಿಯು ಸ್ಥಾಪನೆಯಾಗಲ್ಲ. ಅನೇಕ ಪರಿದ್ಭಾಧೆ ಪ್ರಾಯಗಳಿಂದ ವ್ಯಸಂಚವು ಹಂಚಿ ಹರಿದು ಹೋಗುತ್ತಿದೆ. ಯುದ್ಧವನ್ನು ಯಾವ ಪ್ರಜಾಸ್ವಭುತ್ವದ ಧ್ಯೇಯದ ಮೇಲೆನಡೆಸಿದರೋ ಆ ಧ್ಯೇಯಕ್ಕೆ ವಿರುದ್ಧವಾದ ಸಾಮ್ರಾಜ್ಯಾಡಳಿತ ಪದ್ಧತಿಯು ಮುಕ್ತಾಯವಾಗಲೇ ಇಲ್ಲ ಆ ಸಾಮ್ರಾಜ್ಯ ಧೋರಣೆಗೆ ವಿರುದ್ಧವಾಗಿ ಎಲ್ಲೆಲ್ಲಿಯೂ ಪ್ರಯತ್ನಗಳು ಇಂಥ ವಾಗಿವೆ ಸರ್ವ ಸ್ವತಂತ್ರ್ಯಗಳಲ್ಲಿಯೂ ಪ್ರಜಾಸ್ವಭುತ್ವವು ಯಾವ ಅಡ್ಡಿ ಆತಂಕವೂ ಇಲ್ಲದೆ ಸ್ಥಾಪಿತವಾಗುವುದಕ್ಕೂ ಎಲ್ಲಾ ರಾಜ್ಯಗಳಿಗೂ ಸ್ವಾತಂತ್ರ್ಯ ಲಭಿಸುವುದಕ್ಕೂ ಈ ಎಲ್ಲ ವಗಳು ಪ್ರತಿಕ್ಷಿ ಚಿಹ್ನೆಗಳೆಂದು ಧಾರಾಳವಾ ಕಂಡು ಬಂಯತ್ತಿವೆ ಮಂದೆ ದೊಪುಗೊಳ್ಳುವ ಹೊಸ ಜಗತ್ತಿನ ಸೃಷ್ಟಿಯಲ್ಲಿ ವರ್ಣಭೇದವಾಗಲೀ ಜಾತಿ ಕುಲಗಳ ಹೆಗ್ಗಳಿಕೆಯಾಗಲೀ, ಇಲ್ಲದೇ ಸರ್ವರಿಗೂ ಸಮಾನವಾದ ಹಕ್ಕುಗಳೂ, ಜವಾಬ್ದಾರಿಗಳೂ ಉಳ್ಳಂಥ ಸ್ವತಂತ್ರ ರಾಷ್ಟ್ರಗಳ ಸಂಯೋಜನೆಯಾಗಿ ಅಪೇಕ್ಷಿಸುತ್ತಿದೆ.

ಂ ಂ

ದೌರ್ಭಾಗ್ಯವಶಾತ್ ಅನೇಕ ವರ್ಷಗಳಿಂದ ಪತ್ರಿಕೆಗಳು ಸುಖವಾಗಿ ಅಭಿವೃದ್ಧಿಯಾಗುತ್ತಿಲ್ಲ. ಪತ್ರಿಕಾ ಸ್ವಾತಂತ್ರ್ಯವು ಒಹಳ ವಟ್ಟಿಗೆ ಕಡಿದುಹಾಕಲ್ಪಟ್ಟಿದೆ. 'ಭಾರತೀಯ ದಂಡ ಶಾಸನ ಮತ್ತು 'ಕಂಟೆಂಪ್ಟ್ ಆಫ್ ಕೋರ್ಟ್ಸ್ ಶಾಸನ' ಇವುಗಳು ಸಂವಾದಕನ ತಲೆಯ ಮೇಲೆ ನೇತಾಡುತ್ತಿರುವ ಕ್ರೂರ ಕಠಾರಿಗಳಂತೆ ವಿಜೃಂಭಿಸುತ್ತಿವೆ ಮತ್ತು ಅನ್ಯಾಯಕರವಾದ ಅಧಿಕಾರ ಪ್ರಮತ್ತನಾದ ಸಿಂಹಾಸನ ಪ್ರಭುತ್ವದ ಹಾಸ ಪ್ರಕಾರಗಳನ್ನು ಲೆಕ್ಕಿಸದೇ ಪ್ರಜಾಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು ಪ್ರಬಲ ಪ್ರತಿಬಂಧಕಗಳಾಗಿವೆ.

ಂ ಂ

'ಪ್ರೆಸ್ ಆಕ್ಟ್' ಎಂಬ ಪತ್ರಿಕಾ ಶಾಸನವು ಶಾಸನಕರ್ತರಿಂದ ತೆಗೆದು ಹಾಕಲ್ಪಟ್ಟಾಗ್ಯೂ; ಅದು ತೊಂದರೆಗಳೆಲ್ಲಾ ಒಂದು ರೂಪದಲ್ಲಲ್ಲದಿದ್ದರೆ ಬೇರೊಂದು ರೂಪದಿಂದ ಇದ್ದೇ ಇವೆ ಸರ್ಕಾರದ ಒಪ್ಪಣೆ ಇಲ್ಲದೇ ಯಾವ ವರ್ತಮಾನ ಪತ್ರಿಕೆಯನ್ನಾಗಲೀ ಪತ್ರಿಕೆಯನ್ನಾಗಲಿ; ಪ್ರಕಟಿಸುವಂತಿಲ್ಲ.

ಸರ್ಕಾರವು ಒಪ್ಪಣೆಯನ್ನು ಕೊಡಲು ಒಂದು ಸ್ಪಷ್ಟ ಕಾರ್ಯಕ್ರಮವನ್ನು ಕೈಗೊಳ್ಳುವುದಾದರೆ ಅತ್ಯಂತ ತಾಪತ್ರಯದಿಂದ ಕೂಡಿರುವುದು. ಕೆಲವು ಸಂದರ್ಭಗಳಲ್ಲಿ ಪತ್ರಿಕಾ ಪ್ರಕಟನಗೆ ಹಾಕಿದ ಅರ್ಜಿಯನ್ನು ಪೋಲೀಸ ತನಿಖೆಗೆ ಕಳಿಸುವುದಂತು ತೀರ ಅವಶ್ಯಕವಾದುದಾಗಿದೆ ಆ ಪೋಲೀಸರು ಕೆಲವು ಸಂದರ್ಭಗಳಲ್ಲಿ ಅಭ್ಯರ್ಥಿಯು ನಡತೆಗಳನ್ನು ಹೆಚ್ಚಾಗಿ ಚಿತ್ರಿಸಿ ಸಂತೋಷಪಟ್ಟುಕೊಳ್ಳುವುದಕ್ಕೆ ಎಷ್ಟದವಾಗಿದೆ ನಾಗರಿಕತೆಯುಳ್ಳ ಉನ್ನತ ರಾಷ್ಟ್ರನನ್ನ ಹೊಂದಿರುವ ಈ ಮಾದರಿ ರಾಜ್ಯಕ್ಕೆ ಈ ಪರಿಸ್ಥಿತಿಯು ಕೀರ್ತಿಯನ್ನು ತರುವಂಥದಾಗಿಲ್ಲ! ಉತ್ಸಾಹ ಕಾರಿಯಾದ ಪತ್ರಿಕಾ ವ್ಯವಸಾಯಿಯು ಯಾವ ಪತ್ರಿಕೆಯನ್ನು ಪ್ರಕಟಿಸುವುದಕ್ಕೂ ಯಾವ ಪಧವಾದ ಪ್ರತಿಬಂಧಕವೂ ಇಲ್ಲದಂತೆ ಮಾಡಬೇಕು.

ಂ ಂ

ನಮ್ಮ ಮಾನ್ಯರಾದ ರೆವನ್ಯೂ ಮಂತ್ರಿಗಳು ಶ್ರೀಮಾನ್ ಟಿ. ಪುಲ್ಲಾರೆಡ್ಡಿ ಎಂ. ಎ. ಐ ಸಿ ಎಸ್. ರವರು ಗತವರ್ಷದಲ್ಲಿ ಎನವರಿ ಪೀನೇ ತಾ॥ ದಿನದ ಪತ್ರಿಕೋದ್ಯೋಗಿ ಸಂಘದಲ್ಲಿ ಹೇಳಿದ್ದೇನೆಂದರೆ—

'ಯಾವ ಪತ್ರಿಕೆಯಾಗಲೀ, ನಿಜವಾದ ವಾರ್ತೆಯನ್ನು ಪರೀಕ್ಷಿಸಿ ಪ್ರಕಟಿಸಬೇಕು ಸತ್ಯವನ್ನೆ ಪ್ರಕಟಿಸಬೇಕು ಸತ್ಯವಲ್ಲದ್ದಾವುದನ್ನೂ ಪ್ರಕಟಿಸಬಾರದು ಎಲ್ಲಾ ವಿಧವಾದ ಅಭಿಪ್ರಾಯಗಳನ್ನೂ ಸರಿಯಾಗಿ ಪ್ರಕಟಿಸಿ ಮಹಾಜನರು ಯಾವುದು ಸರಿಯೋ ಅದನ್ನು ಇತ್ಯರ್ಥ ಮಾಡುವಂತೆ ಮಾಡಬೇಕು ಇದರಿಂದ ಪತ್ರಿಕೆಗಳು ಪವಿತ್ರ ಸೇವೆ ಮಾಡಿದಂತಾಗುತ್ತದೆ ಆದರೆ ಶುದ್ಧಾಂಗವಾಗಿ ಯಾವ ಕಡೆಗೂ ಸೇರದೆ ಇರುವುದು ಅತಿ ಪ್ರಯಾಸವಾಗಬಹುದು ಆದರೆ ವಾಸ್ತವವಾಗಿ ಯಾವ ಒಬ್ಬಿಪೂರ್ವಕವಾದ ಅಪ್ರಮಾಣಿಕತೆ ಇರಬಾರದು'. ಈ ಮಾತು ಬಹಳ ಚೆನ್ನಾಗಿದೆ. ಆದರೆ ಕೆಲವು ಸಂದರ್ಭಗಳಲ್ಲಿ ದುರದೃಷ್ಟವಶಾತ್ ಸತ್ಯವನ್ನೇ ಹೇಳಿದ ಆ ಹದಿನಾರಾಣೆ ಸತ್ಯವನ್ನೇ ಮಾಡಿದರೂ, ಸರ್ಕಾರದ ಉನ್ನತಾಧಿಕಾರಿಗಳಿಗೆ ಅಪ್ರಿಯವಾಗಿಯೇ ಪರಿಣಮಿಸುವ ಸಂಭವ ಪರಿಪೂರ್ಣವಾದ ಮಾನವನು ದುರ್ಲಭ, ಪರಿಪೂರ್ಣವಾದ ಸರ್ಕಾರವೂ ದುರ್ಲಭ ಜನರ ಕ್ಷೇಮವನ್ನು ರಾಜ್ಯದ ಕ್ಷೇಮಕ್ಕಾಗಿ ಸತ್ಯವನ್ನೇ ಸಂಚಾರ ಮಾಡಿದಾಗ್ಯೂ ಸರ್ಕಾರದ ಹೇಳಿಕೆಯೇ ಬೇರೆ ಪಧವಾಗಿರುತ್ತದೆ ಇಂಥಾ ಸಂದರ್ಭಗಳಲ್ಲಿ ಸರ್ಕಾರವು ಸ್ವಪ್ರತಿಷ್ಠೆಗೇ ಅಂಟಿಕೊಂಡು ತಾವು ತನ ಮಾಡಿದ್ದನ್ನು ಬಹಿರಂಗಪಡಿಸಿ ಕೂಗಿಕೊಳ್ಳಲೇಬೇಕು ಸಮ್ಮ ದೇಶದಲ್ಲಿ ಎಷ್ಟೋ ಪತ್ರಿಕೆಗಳು ದೇಶಭಕ್ತಿಯಿಂದಲೂ ಪತ್ರಿಕಾ ಮೂಲಕರ್ತೆಯಿಂದಲೂ ಇವೆ. ಸರ್ಕಾರವೂ ಕೂಡಾ ಪತ್ರಿಕೋದ್ಯೋಗಿಗಳೊಡನೆ ಪಹಕರಿಸಬೇಕು. ಪತ್ರಿಕೆಗಳು ತಾವು ಟೀಕೋಪಾಯನವನ್ನು ಮಾಡುತ್ತಿವೆಯೆಂಬ ಭಾವನೆಯಿಂದಲಾಗಲಿ ವೈಯಕ್ತಿಕ ದ್ವೇಷದಿಂದಲಾಗಲಿ ಸ್ವಯಂಪ್ರೇರಿತವಾಗಿ ಸತ್ಯವನ್ನು ಮುಚ್ಚಿಡಬಾರದು ಪತ್ರಿಕಾ ಸ್ವಾತಂತ್ರ್ಯವನ್ನು ಎಲ್ಲರೂ ಮಾನ ಮಾಡಲೇಬೇಕು ಪತ್ರಿಕೆಗಳಿಗೆ ತಾತ್ಪರ್ಯದಲ್ಲಿ ನಾಲ್ಕನೆಯ ಸ್ಥಾನವನ್ನು ಕೊಟ್ಟರೆ ಅದರ ಮರ್ಯಾದೆಯನ್ನು ಸ್ಥಾಪಿಸಬೇಕು.

ನವ್ಯ ವೈಸೂರಿನಲ್ಲಿ ಯಾವ ಲಂಡನ್ನಿನ ಫ್ಲೀಟ್ ಸ್ಟ್ರೀಟ್‌ನಂತೆ ಹಗಲಿರುಳೆನ್ನದೆ ದೊಟರಿಗಳ ಶಬ್ದವಾಗುತ್ತಾ ಪತ್ರಿಕೋದ್ಯೋಗಿಗಳು ಉತ್ಸಾಹದಿಂದ ಸಲಯುತ್ತಾ ಇರುವಂಥಾ ಜಿಜ್ಞಾನ ಮಾರ್ಗದ ರಾಜಧಾನಿಗಳು ನಿರ್ಮಾಣವಾಗಲೀ ಎಂದು ಆಶಿಸೋಣ! ಸಮ್ಮ ದೇಶದಲ್ಲಿಯೂ ದಿನಪತ್ರಿಕೆಗಳು ಮಾಸಪತ್ರಿಕೆಗಳು ವಾರಪತ್ರಿಕೆಗಳು ಪಹಸ್ರಪ್ರಾಲು ಬೆಳೆದು ಮಹಾ ಜನರ ಚಿಚ್ಛಕ್ತಿಯ ಚಿಯನ್ನು ಸಂತೃಪ್ತಿಗೊಳಿಸಲಿ ಎಂದು ಹಾರೈಸೋಣ

ಲಂಡನ್ ಫೆ. 5—ಸ್ಯಸೆಂಬ್ಲಿಯ ಸದಸ್ಯರಿಗೆ ಅಭಿನಂದನೆ ಸಲ್ಲಿಸಿದ ಭಾರತ ಕಾರ್ಯದರ್ಶಿ ಶ್ರೀ ಅಮೆರಿ ಅವರು ಭಾರತಕ್ಕೆ ಕ್ಷಾಮದ ಭೀತಿಯು ಇದೆಯೆಂದು ಅಹಾರ ಮಂತ್ರಿ ಸರ್ ಬನ್ನೆಟ್ ಅವರು ಕೆಳಮನೆಯಲ್ಲಿ ತಿಳಿಸಿದರು.

ಂ ಂ

ಮಥುರಾ ಫೆ. 7—ಭರತಪುರದ ಮಹಾರಾಜರು ತನ್ನ ದೇಶದ ಕೋಷಿಯಲ್ ಆಫ್ ಸ್ಟೇಟ್ ಸಭೆಯಿಂದ ಮುಸ್ಲಿಮರನ್ನು ನಾವಣೆ ನಡೆಯುವಂತೆ ತೀರ್ಮಾನಿಸಿದ್ದರಿಂದ ಮಂತ್ರಿಯಾಗುವವರು 30 ವರ್ಷಕ್ಕೆ ನೇಲ್ಪಟ್ಟಿದ್ದು ಹಿಂದೀಭಾಷೆ ಪರಿಚಿತರಾಗಬೇಕೆಂದಿರುವರು.

ವಾರ್ತಾತರಂಗ

ಬೊಂಬಾಯಿ ಫೆ. 6—ಬಸ್ ಮತ್ತು ಟ್ರಾಂ ಸರ್ವಿಸ್ಸುಗಳು ನಿನ್ನೆ ಸಿಲ್ಲಿಸಲ್ಪಟ್ಟಿದ್ದವು ಬೊಂಬಾಯಿ ಸರಕಾರ ಟ್ರಾಂ ಕಂಪೆನಿ, ಸ್ವಾಭಿಮಾನ ಯೂನಿಯನ್ ನವರಲ್ಲಿ ಒಪ್ಪಂದವಾಗಿ ಈ ದಿನ 11 ಘಂಟೆಯಿಂದ ಮತ್ತೆ ವಾಹನ ಓಡಾಟ ಪ್ರಾರಂಭವಾಯಿತು.

ಂ ಂ

ಕೈರೋ ಫೆ. 5—ವೇತನ ಈಜಿಪ್ಟಿನಿಂದ ಕೈರೋವಿಗೆ ಬರುತ್ತಿದ್ದ ರೈಲಿನಲ್ಲಿ ದ್ದ 20 ಸಾವಿರ ಪೌಂಡುಗಳನ್ನು ಡಕಾಯಿತರು ಕದ್ದು ಪರಾರಿಯಾದರು.

ಂ ಂ

ಬೆಂಗಳೂರು ಫೆ. 7. ಒಲಂಪಿಕ್ ಆಟಗಳ ಸಂಬಂಧದ ಸೈಕಲ್ ರೇಸಿನಲ್ಲಿ ಬೊಂಬಾಯಿನ ಹೋಮಿ ಎಂಬಾತನು ಸೈಕಲ್ಲಿನಿಂದ ಬಿದ್ದು ಗಾಯಗೊಂಡು ಜ್ಞಾನವಿಲ್ಲದಿದ್ದನು ಆಸ್ಪತ್ರೆಗೆ ಕೂಡಲೇ ಸಾಗಿಸಲಾಯಿತು. ಈಗ ಅವನು ಗುಣಮುಖನಾಗುತ್ತಿರುವನೆಂದು ತಿಳಿಯಬಂದಿದೆ.

ಂ ಂ

ಕ್ಯಾ || ರೇಸಿದರಿಗೆ ವಿಧಿಸಿದ ಶಿಕ್ಷೆಯನ್ನು ಕುರಿತು ಜಿನ್ನಾ ಸಾಹೇಬರು ಭಾರತದ ಮಹಾ ದುರ್ದಶನಾಯಕರನ್ನು ಪ್ರಶ್ನಿಸುತ್ತಾ ತಾ ನವಾಜ ಮುಂತಾದವರಿಗೆ ಗಳನ್ನು ಮುಲಾಜೆ ಮಾಡಿ ರೇಸಿನಿಂದ ಬಿಡದೆ ಪಕ್ಷಪಾತವೇಕೆಂದಿರುವರು.

ಂ ಂ

ಲಂಡನ್ ಫೆ. 5 ರಷ್ಯಕ್ಕೆ ಎಕ್ಸ್ಪೋರ್ಟ್ ಯ ಅಭಾವ ನಿರೀಕ್ಷಿತವಾಗಿದೆಯೆಂದೂ ಅದು ಎಲ್ಲಿ ದೊರೆಯುವುದೆಂದರೆ ಅಲ್ಲಿ ಕೈಹಾಕಲು ಸಿದ್ಧವಾಗಿರುವುದೆಂದೂ ಪ್ರಸಿದ್ಧ ವ್ಯಾಪಾರಿಗಳ ಮಾಹಿತಿ ಸಂಪತ್ತಿನ ಜಾರ್ ಕಂಪೆನಿಯವರು ಅಭಿಪ್ರಾಯ ಪಟ್ಟಿದ್ದಾರೆ.

ರ ಂ

ಬೆಜವಾಡ ಫೆ. 5—ಗಾಂಧೀಜಿಯು ದಕ್ಷಿಣ ಭಾರತಕ್ಕೆ ಬೀಟಿಕೊಟ್ಟು ಸಿ. ಆರ್. ದಾಸ್ ಮುಂದಿನ ಸುಧಾರಿಸಿದ ಮಹಾ ಸ್ಪರ್ಧಾನೆನವನ್ನಾಗಿ ಮಾಡಬೇಕೆಂದು ಕೆಲವರು ಅಂದು ಕೊಂಡ ವಿಷಯದಲ್ಲಿ ಗಾಂಧೀಜಿ ಮರುಗಿದರು ತಾವು ಹಿಂದೀಸ್ವರಾಜ ರಜತೋತ್ಸವ ಶಾಖೆಯಲ್ಲಿ ಮುತ್ಸಾವ ಕಾರ್ಯಕ್ರಮಕ್ಕೆ ಅಂದಿಲ್ಲವೆಂದರು.

ಅಣು ಬಾಂಬು

ಮಿತ್ರ ಪಕ್ಷದ ವಿಜ್ಞಾನಿಗಳಿಂದ ನಿರ್ಮಿತವಾಗಿ, ಮಿತ್ರ ಸೈನಿಕರಿಂದ ನಾಗಸಾಕಿ ಹಿರೋಷಿಮಾ ನಗರಗಳ ಮೇಲೆ ಪ್ರಯೋಗಿಸಲ್ಪಟ್ಟ ಅಟೆಂ ಬಾಂಬುಗಳು ಜಪಾನ್ ಯುದ್ಧವನ್ನು ಇಷ್ಟು ಬೇಗ ಕೊನೆಗೊಂಡ ದಕ್ಕೆ ಮುಖ್ಯ ಕಾರಣವೆಂದು ಎಲ್ಲರೂ ಒಪ್ಪಿದ್ದಾರೆ. ಕೋಟ್ಯಾಂತರ ರೂಪಾಯಿಗಳ ವೆಚ್ಚದಿಂದ ತಯಾರಿಸಿದ ಈ ಬಾಂಬುಗಳೆಂಡನ್ನು ಎಸೆದೊಡನೆ ಯುದ್ಧ ಮುಗಿಯಬೇಕಾದರೆ ಜಪಾನಂ ಎದೆ ಕುಸಿಯುವಂತೆ ಲಕ್ಷಾಂತರ ಜನರ ಮರಣವೂ ಅಪಾರ ನಷ್ಟವೂ ಸಂಭವಿಸಿಬೇಕು. ಕಳೆದ ಆಗಸ್ಟು ತಿಂಗಳಲ್ಲಿ ಬಿದ್ದ ಬಾಂಬುಗಳ ಉಪಟಳವು ಇನ್ನೂ ಶಮನವಾಗಿಲ್ಲವೆಂದೂ ಹೊಸ ಬಾಯಿಲೆಗಳು ತಲೆದೋರಿ, ಜನರಿಗೆ ರಕ್ಷಣೆಯಾವಾಗಿ, ಕೂದಲುದುರಿ, ಈಗಲೂ ಸಾಯುತ್ತಿರುವರೆಂದು ವರದಿಯಾಗಿದೆ. ಹೀಗೆ ಅಪಾಯವಾದ ಭಯೋತ್ಪಾದನೆಯಿಂದ ಶಾಂತಿಗೆ ಕಾರಣವಾಗಿರುವ ಈ ಪರಮಾಣು ಬಾಂಬುಗಳ ಭೌತ ತರ್ಮವನ್ನೂ, ರಚನಾಕ್ರಮವನ್ನೂ ತಿಳಿಯಲಿಚ್ಛಿಸುವುದರಿಂದ ಪರಮಾಣುಗಳಲ್ಲಿ ಅಡಗಿರುವ ಶಕ್ತಿಯನ್ನು ನಿತ್ಯಜೀವನದಲ್ಲಿ ಮಾನವನ ಹಿತಸಾಧನೆಗೆ ಉಪಯೋಗಿಸುವ ದಿನವು ಬೇಗನೆ ಒರಹುದೆಂದು ಭಾಸವಾಗುವುದು.

ಪ್ರಪಂಚದಲ್ಲಿರುವ ವಸ್ತುಗಳೆಲ್ಲವೂ 92 ಭೂತಗಳಲ್ಲಿ ಕೆಲವುಗಳ ಸಂಯೋಗದಿಂದ ಉಂಟಾಗಿರುವುದೆಂದು ರಸಾಯನಶಾಸ್ತ್ರಜ್ಞರು ನಿಶ್ಚಯಿಸಿದ್ದಾರೆ. ಪ್ರತಿ ಭೂತವೂ ತನ್ನಿಂ ಭೂತಪರಮಾಣುಗಳಿಂದಕೂಡಿದೆ. ಈ ಅತಿ ಸೂಕ್ಷ್ಮವಾದ ಪರಮಾಣುಗಳನ್ನೇದ್ರು ಸ್ಥಾನಪಲ್ಲಿನ ವಿದ್ಯುತ್ಶಕ್ತಿಯಿಂದ ಕೂಡಿದ ಬೀಜಕಣಗಳಿವೆ. ಈ ಬೀಜಕಣಗಳು ಋಣಶಕ್ತಿಗಳು ಎಡಬಿಡದೆ ಸುತ್ತುತ್ತಿರುತ್ತವೆ. ಪರ್ಯಾಯಪಥದಲ್ಲಿ ಭೂತಗಳ ಸ್ಥಾನಾಂಕಕ್ಕೆ ಸಮನಾಗಿ ಬೀಜಕಣಗಳಲ್ಲಿ ಧನವಿದ್ಯುನ್ಮಾನವಿರುತ್ತದೆ; ಇದೇ ಭೂತಪರಮಾಣುಗಳಿಗೆ ಹೆಗ್ಗುರುತು. ಆದರೆ ಬಾದು ಭೂತದ ಪರಮಾಣುಗಳೆಲ್ಲಾ ಸಮತೂಕದವುಗಳಾಗಿರುವುದಿಲ್ಲ. ಬೀಜಕಣದ ಧನವಿದ್ಯುನ್ಮಾನವು ಒಂದೇ ಆದರೂ ತೂಕ ವ್ಯತ್ಯಾಸದಿಂದ ಬೇರೆಬೇರೆ ಸಕ್ಷೇತ್ರಗಳಿರುವವು. ಬೀಜಕಣಗಳು ಧನಕಣಗಳಿಂದಲೂ ಶೂನ್ಯಕಣಗಳಿಂದಲೂ ಕೂಡಿರುವುದರಿಂದ ಶೂನ್ಯಕಣಗಳ ವ್ಯತ್ಯಾಸವೇ ಸಕ್ಷೇತ್ರಗಳಿಗೆ ಕಾರಣವಾಗುವುದು. ಧನಕಣಗಳಿಂದಲೂ ಶೂನ್ಯಕಣಗಳಿಂದಲೂ ಹೊಡೆಯಲ್ಪಟ್ಟ ಪರಮಾಣುಗಳ ಸರಿನರ್ತನೆ ಹೊಂದಿ ಬೇರೆ ಪರಮಾಣುಗಳಾಗುವುವೆಂದು ಇತ್ತೀಚಿಗೆ ಕಂಡು ಹಿಡಿಯಲ್ಪಟ್ಟಿದೆ. ಈ ಶೋಧನೆಗಳು ಮುಂದುವರಿದಂತೆ ಬೀಜಕಣದ ಭೌತ ಶಾಸ್ತ್ರವು ಬೆಳೆದು ಪರಮಾಣು ಬಾಂಬುಗಳ ತಯಾರಿಕೆಗೆ ಕಾರಣವಾಯಿತು.

ಬೆರಿಲಿಯಂ ಭೂತ ಪರಮಾಣುಗಳ ಆರ್ಕಾನಿಲದ ಬೀಜಕಣಗಳಿಂದ ಹೊಡೆದರೆ ಶೂನ್ಯಕಣಗಳು ಹೊರಬೀಳುವುವೆಂದು ೧೯೩೨ರಲ್ಲಿ ಛಾಡ್ವಿಕನು ಕಂಡು ಹಿಡಿದನು. ಇವುಗಳು ತೂಕದಲ್ಲಿ ಧನಕಣಕ್ಕೆ ಸಮವಾದರೂ ವಿದ್ಯುದ್ವ್ಯಂಶರಹಿತವಾಗಿರುವುದರಿಂದ ಬೀಜಕಣಗಳನ್ನು ಪ್ರವೇಶಮಾಡಲು ಶೂನ್ಯಕಣಗಳಿಗೆ ಹೆಚ್ಚು ಅವಕಾಶವಿರುತ್ತದೆ. ಮುಂದಗಾಮಿಗಳಾದ ಶೂನ್ಯಕಣಗಳು ಯುರೇನಿಯಂ ಭೂತಪರಮಾಣುಗಳನ್ನು ಒಳಹೊಕ್ಕರೆ ಕೆಲವು ಯುರೇನಿಯಂ ಬೀಜಕಣಗಳ ನಿರ್ಭೇದವಾಗುವುದೆಂದು ಹ್ಯಾಕ್ ಮತ್ತು ಸ್ಟ್ರಾಸ್ಮನ್ ಎಂಬ ವಿಜ್ಞಾನಿಗಳು ೧೯೩೯ರಲ್ಲಿ ಕಂಡು ಹಿಡಿದರು. ಈ ಬೀಜಕಣ ನಿರ್ಭೇದವು ೨೩೫ ತೂಕವುಳ್ಳ ಯುರೇನಿಯಂ ಸಕ್ಷೇತ್ರದಲ್ಲಿ ಮಾತ್ರ ಸಾಧ್ಯವೆಂದು ಗೊತ್ತಾಗಿದೆ. ಈ ಸಕ್ಷೇತ್ರವನ್ನು ಬೇರ್ಪಡಿಸುವುದು ರಾಸಾಯನ ಶಾಸ್ತ್ರದೃಷ್ಟಿಯಿಂದ ಅಸಾಧ್ಯ. ಭೌತ ದೃಷ್ಟಿಯಿಂದ ಶ್ರಮಸಾಧ್ಯವಾದರೂ ಅಪಾರವಾದ ವೆಚ್ಚ ತಗಲುವುದು. ೨೩೫ ತೂಕವುಳ್ಳ ಯುರೇನಿಯಂ ಬೀಜಕಣ ನಿರ್ಭೇದದಿಂದ ಹೆಚ್ಚು ಕಡಿಮೆ ಸಮತೂಕದ ಮತ್ತೆರಡು ಪರಮಾಣುಗಳು ತಲೆದೋರಿ ಶೂನ್ಯಕಣಗಳು ಧನಕಣಗಳು ಹೊರಚೆಲ್ಲುವುವು. ಅಲ್ಲದೆ ಅಗಾಧವಾದ ಶಕ್ತಿಯು ಹೊರಹೊಮ್ಮುವುದು. ಸ್ವಯಂ ತೇಜೋಪ್ರವರ್ತಕವಾದ ಯುರೇನಿಯಂ ಬೀಜಕಣವು ಹೊದಲೇ ಚಿಕ್ಕದು. ಅದನ್ನು ಶೂನ್ಯಕಣವು ಒಳಹೊಕ್ಕರಂತೂ ನೀರಿನ ಹನಿ ಒಡೆದಂತೆ ಎಂಡಾಗಿ ಒಡೆದು ಶಕ್ತಿ ಪ್ರಸಾರವಾಗುವುದು. ಈ ನಿರ್ಭೇದದಿಂದ ಬರುವ ಶೂನ್ಯಕಣಗಳ ಸುತ್ತಲಿರುವ ಹಲವು ಯುರೇನಿಯಂ ಪರಮಾಣುಗಳ ನಿರ್ಭೇದಕ್ಕೆ ನೆರವಾಗುತ್ತವೆ ಹೀಗಾಗುವುದರಿಂದ ಸ್ವಲ್ಪ ಯುರೇನಿಯಮ್ಮಿಗೆ ಶೂನ್ಯಕಣ ತಗುಲಿದೊಡನೆ ಬೀಜಕಣ ನಿರ್ಭೇದದಿಂದ ಅಸ್ಫೋಟನೆ ಯುಂಟಾಗಿ ಅಪಾರವಾದ ಶಕ್ತಿ ಹೊರಬೀಳುವುದು. ಇದೇ ಪರಮಾಣುಗಳಲ್ಲಿನ ಭೌತ ತತ್ವ. ಬಾಂಬು ಸಿಡಿದ ಮೇಲೆಕೃತಕ ತೇಜೋಪ್ರವರ್ತಕ ಭೂತಗಳು ಸುತ್ತಮುತ್ತಲ ಪ್ರದೇಶಗಳಲ್ಲಿ ಬಹುಕಾಲವಿದ್ದು ಹೊಸ ವಿಧವಾದ ಉಪದ್ರವಗಳಿಗೆ ಕಾರಣವಾಗಬಹುದು. ಈ ಬಾಂಬುಗಳ ರಚನೆಗೆ ಸೇರಿದ ಮರ್ಮಗಳು ಇನ್ನೂ ಹೊರಬಿದ್ದಿಲ್ಲ. ಬಾಂಬಿನ ಗಾತ್ರ ತೂಕಗಳ ವಿಚಾರದಲ್ಲಿ ಊಹಾಪೋಹಗಳಿವೆ. ಬಾಂಬು ಬಿದ್ದ ಸ್ಥಳದಲ್ಲಿ ವಾತಾವರಣದಲ್ಲೇ ಶೂನ್ಯಕಣಗಳು ಹೇಗೆ ಯುರೇನಿಯಂ ಭೂತವನ್ನು ಒಳ ಹೋಗುವುವೆಂದು ಗೊತ್ತಿಲ್ಲ. ಅಲ್ಲದೆ ಬಾಂಬಿನ ಮುಖ್ಯ ಭಾಗವು ಪುಟ್ಟ ಚೆಂಡಿನಷ್ಟಿದ್ದರೂ ಅದರಮೇಲಿನ ಹೊದಿಕೆಯು ಹೆಚ್ಚು ತೂಕವಿದ್ದು ಬಾಂಬು ಸಿಡಿದಾಗ ಹಲವು ಮೈಲಿಗಳ ದೂರ ಸಾವುನೋವುಗಳನ್ನು ಬೀರಬಹುದು.

ಈ ಪರಮಾಣುದ್ದದ ಮೊದಲು ನಾಜಿ ವಿಜ್ಞಾನಿಗಳು ಎದಷ್ಟು ಯುರೇನಿಯಂ ಭೂತವನ್ನು ಶೇಖರಿಸಿಟ್ಟರೂ ಅವರಿಗೆ ಆದರಿಂದ ಪ್ರಯೋಜನವಾಗಲಿಲ್ಲ. ಅತ್ಯಲ್ಪಕಾಲದಲ್ಲಿ ಮಿತ್ರಜ್ಞಾನಿಗಳು ಈ ಕೆಲಸಕ್ಕೆ ಕೈಹಾಕಿ, ಪರಮಾಣು ಬಾಂಬುಗಳನ್ನು ನಿರ್ಮಿಸಿದ್ದು ಭೌತಶಾಸ್ತ್ರ ದೃಷ್ಟಿಯಿಂದ ಬಹು ಯಶಸ್ವಿಯಾದ ಕಾರ್ಯವೇ ಸರಿ. ಜಗತ್ತಿನಲ್ಲಿ ಭಯೋತ್ಪಾದನೆಗೆ ಸೃಜಿಸಲ್ಪಟ್ಟ ಪರಮಾಣು ಬಾಂಬುಗಳು ಶಾಂತಿಸ್ಥಾಪನೆಯಾದ ನಂತರ ಮಾನವನ ಉನ್ನತಿಗೆ ನೆರವಾಗುವುವು. ಒಂದು ಗ್ರಾಂ ಯುರೇನಿಯಮ್ಮಿನಿಂದ ಹೊರಸೂಸುವ ಶಕ್ತಿಯ ಬೆಲೆ ಎರಡು ಲಕ್ಷ ರೂಪಾಯಿಗಳಿಗೆ ಮೀರಿರುವುದು. ಒಂದು ಪರಮಾಣು ನಿರ್ಭೇದದಿಂದ ಜನಿಸುವ ಶಕ್ತಿಗೆ ಇಂಗಾಲದ ಒಂದು ಪರಮಾಣುವನ್ನು ಸುಟ್ಟರೆ ಒರುವ ಶಕ್ತಿಗೆ 5 ಕೋಟಿ ಪಾಲು ಜಾಸ್ತಿ. ಇದರಿಂದ ಕಲ್ತಿದ್ದಲು ಎಣ್ಣೆ ಗಿಂತಾಯವು ಹೆಚ್ಚುವುದು. ಒಂದು ಪೌಂಡು ಪರಮಾಣು ಶಕ್ತಿಯು ಐನೂರು ಲಕ್ಷ ಪೌಂಡು ಕಲ್ಲಿದ್ದಲಿಗಾಗಲೀ ಅಥವಾ 30 ಲಕ್ಷ ಗ್ಯಾಲನ್ ಪೆಟ್ರೋಲೆಣ್ಣೆಗಾಗಲೀ ಸರಿತೂಗುವುದೆಂದು ಲೆಕ್ಕ ಹಾಕಲ್ಪಟ್ಟಿದೆ ಆದಕಾರಣ ಇನ್ನು ಮುಂದೆ ಪರಮಾಣು ಶಕ್ತಿಯ ಪ್ರಯೋಗದಿಂದ ಕೈಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿ ತಲೆದೋರಬಹುದು. ಆವಿ ಶಕ್ತಿಯನ್ನು ಕಂಡುಹಿಡಿದ ಮೇಲೆ ಸಂಭವಿಸಿದ ಕ್ರಾಂತಿಗಿಂತ ಇದು ಬಹು ಹೆಚ್ಚಿನದಾಗಿ ಪರಿಣಮಿಸಬಹುದೆಂಬ ಭರವಸೆಯಿದೆ. ಶಕ್ರ, ಚಂದ್ರಾದಿ ಲೋಕಗಳನ್ನು ತಲಪಿ ಬರುವ ಆಶೆ ಮೂಡುತ್ತಿದೆ.

[ಇದು ಡಾ || ಎಲ್. ಸೀಬಯ್ಯನವರು ತಾ || 16 ರಲ್ಲಿ ಮಂಡ್ಯದ ಟೌನ್ ಹಾಲಿನಲ್ಲಿ ಮಾಡಲಿರುವ 'ಪರಮಾಣು ಬಾಂಬ್' ವಿಷಯದ ಭಾಷಣದ ಸಾರಾಂಶ]

ಹಡಗಿನಲ್ಲಿ ವರ್ಣದ್ವೇಷ

ಲಂಡನ್ ಜ. 31—ಜನವರಿ ತಾರೀಕು 14 ರಲ್ಲಿ ಸೌತ್ ಹ್ಯಾಂಪ್ಟನ್ನಿಂದ ಲಂಡನ್ನಿಗೆ ತೆರಳಿದ ಹಡಗಿನಲ್ಲಿದ್ದ ಭಾರತೀಯ ಪ್ರವಾಸಿಕರ ಒಗ್ಗೆ ಬಿಳಿ ವರ್ಣದವರು ತೋರಿಸಿದ ಅಗೌರವ ನೀತಿಯನ್ನು 'ಮೇಂಚೆಸ್ಟರ್ ಗಾರ್ಡಿಯನ್', ಪತ್ರಿಕೆಯು ಬಹಿಷ್ಕಾರಾಂರಾದ ಮಿ|| ಜಾರ್ಜ್ ಅಂವೇಲರವನು ತನ್ನೊಂದು ಲೇಖನದಲ್ಲಿ ಸ್ಪಷ್ಟಗೊಳಿಸಿರುವರು.

ಈ ಹಡಗಿನಲ್ಲಿ ಒಟ್ಟಾಗಿ 40 ಮಂದಿ ಭಾರತೀಯ ವಿದ್ಯಾರ್ಥಿಗಳು, ಅಧಿಕಾರಿಗಳು ಹಾಗೂ ಇನ್ನಿತರು ಇದ್ದರಂತೆ. ಎಲ್ಲರೂ ಏಕರೀತಿಯಾಗಿ ಸ್ಥಳದ ಬೆಲೆಯನ್ನು ತಿರ್ತುವುದರಿಂದ ತತ್ವಕ್ಕೆನು ಸಾರವಾಗಿ ಯಾರಿಗೂ ಯಾವೊಂದೂ ನ್ಯತ್ಯಾಸನೆನ್ನು ತೋರುವ ಕಾರಣವಿಲ್ಲ ಆದರೆ ನಿಜತ್ವಕ್ಕೂ ಯುರೋಪಿಯನರಿಗೆ ಮಾತ್ರ ಸೂಗಸಾದ ಆಸನಗಳನ್ನು ಕಾಯ್ದಿಡಲಾಗಿದ್ದಿತ. ಆದರೆ ಭಾರತೀಯರಿಗಿತ್ತ ಸ್ಥಳದ ವಿಚಾರವು ಮಾತ್ರ ವಿಶೇಷವಾಗಿದ್ದಿತು. ಬರೇ ಎಂಡು ಜನರು ಮಾತ್ರ ಇರಲು ಸಾಧ್ಯವಿರುವ ಒಂದು ಕೊಠಡಿಯಲ್ಲಿ ಆರು ಅಥವಾ ಏಳು ಮಂದಿಯನ್ನು ತುಂಬಿಸಿದುದು ಮಾತ್ರ ಎಲ್ಲ ಆವರಿಗಿಕ್ಕ ಕೊಠಡಿಗಳಲ್ಲಿ ಸ್ವಲ್ಪವೂ ಗಾಳಿ ಸಂಚಾರ ಇಲ್ಲದವುಗಳಾಗಿದ್ದವು.

ಅಖಿಲ ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಧಿವೇಶನವು ಮಾರ್ಚಿ ಕಡೆಯ ವಾರದಲ್ಲಿ ಹಾಸನ ಅಥವಾ ಆರಸೀಕೆರೆಯಲ್ಲಿ ನಡೆಯುವುದೆಂದು ಹೇಳಲಾಗಿದೆ.

ನೂರೆಂಬರ್ಗ್ ಫೆ. 3—ವಿಚಾರಣೆಗೆ ಗುರಿಯಾಗಿರುವ ಗೋರಿಂಗ್ ಮುಂತಾದ ನಾಜೀ ಮುಖಂಡರನ್ನು ಬಿಡಿಸಿ ಪಾರಾಗಲು ಪ್ರಯತ್ನ ನಡೆಯುತ್ತಿದೆ ಯೆಂಬವದಂತಿ ಹರಡಿದ್ದು, ಕೋರ್ಟ್ ಸ್ವತ್ಪ ಸಜ್ಜಿತ ಬಲವಾದ ಕಾವಲಿಡಲಾಗಿದೆ.

ಮಲಯದ ಸಿಂಹ ಜಿ|| ಯಮಾಷಿಟಾರವರ ಜೀವದಾನದ ಅಪೀಲನ್ನು ಅಮೆರಿಕಾ ಸರ್ವೋಚ್ಚ ಕೋರ್ಟು ನಿರಾಕರಿಸಿ, ಗಲ್ಲಿಗೇರಿಸ ಬೇಕೆಂದು ತಿಳಿಸಿದೆ.

ಮದರಾಸು ಫೆ, 5—ಬಟ್ಟೆ ನಿಯಂತ್ರಣಾಜ್ಞೆಯನ್ನು ಉಲ್ಲಂಘಿಸಿದ ಅಪಾದನೆ ಮೇಲೆ 34 ಲಂಗೀ ವ್ಯಾಪಾರಿಗಳಿಗೆ ರೂ 100 ರಿಂದ ರೂ 1000 ದ ವರೆಗೆ ಜುಲ್ಮಾನೆ ವಿಧಿಸಲಾಗಿದೆ.

ವಿವಿಧ ವರ್ತಮಾನ

ಬರ್ಲಿನ್ ಫೆ. 4—ಜರ್ಮನಿಯಲ್ಲಿ ನಾರೀ ಕೈಗಾರಿಕೆಗಳೇನೂ ನಡೆಯದ್ದಂತೆ ಮಿತ್ರರು ಪ್ರತಿಬಂಧಿಸಿದ್ದಾರೆ.

ವಾಷಿಂಗ್‌ಟನ್ ಫೆ. 1— ಜೈನಾಕ್ಕೆ ಯೋಗಿ ಕೃಷ್ಣೇಕ ಮತ್ತು ಅವರ ಪ್ರ ಸ್ಪರ್ಧಿಗಳಲ್ಲಿ ಸಮಾಧಾನ ಅಂಕರಿಸಿದ ನೇರಕಾ ರಾಯಭಾರಿ ಜನರಲ್ ಹರ್ಲಲರು ಫ್ಲಿಪ್ರದಲ್ಲಿ ಭಾರತಕ್ಕೆ ಬಂ ದು ಗಾಂಧಿ ವೇವಲ್ ಮಧ್ಯೆ ಸಂಧಾನ ಮಡಿಸುವರೆಂದು ನರ್ತಮಾನ ಹೊರಟಿಸೆ

ಪಾಟ್ನಾ ಫೆ 4 — ಶ್ರೀ ಜಯಪ್ರ ಕಾಶ ನಾರಾಯಣರನ್ನು ಕ್ಷೀಪ್ರದಲ್ಲೇ ಬಿಡುವಂತೆ ಪಟಾ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದಾ ತಿಳಿಯಬರದೆ

ಸರೋಜಿನಿಯವರ ವಜ್ರೋತ್ಸವ

ಶ್ರೀಮತಿ ಸರೋಜಿನಿ ನಾಯ್ಡುರವರ ವಜ್ರೋತ್ಸವ ಇದೇ ತಾ || 13 ರಲ್ಲಿ ಹೈದರಾಬಾದಿನಲ್ಲಿ ನಡೆಯುವುದು.

At Opera — From 7-2-46

ಪರಂಜ್ಯೋತಿ

(ತಮಿಳು ಚಿತ್ರ)

ವಿ ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ

ಬಾಲ ಸುಬ್ರಹ್ಮಣ್ಯಂ ಜಯಗೌರಿ

ಕೃಷ್ಣ ಮಧುರಂ ವಾಶ್ರದಾರು

ಪ್ರತಿದಿನ ಮೂರು ಆಟಗಳು

Morning Shows from 8-2-46

JohnnyDoesn't Live Here Any More

ಹಸಕ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಸ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

ಉಡುಪುಗಳನ್ನು ಅತಿ ಜೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಅಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗಾರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ಯಡಿಯು ಶಿತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಏಳಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಪ್ರಸಿದ್ಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ರಕ್ತವರ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿಗೆ ರೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭, ಚಾಮುಂಡಾಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing

L. N. Press

Srirampet MYSORE